**ಸಾಕ್ಷಿಗೆ ದಿನಾಂಕ : *24-11-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು ಃ ವಾದಿಯರ ಪರ ಶ್ರೀ. ಎಸ್ ಬಿ ಪಿ ವಕೀಲರಿಂದಃ</u>**

ಸನ್ 1981 ರಲ್ಲಿ ಚೆನ್ನಪ್ಪ ಮತ್ತು ಬೈಲಪ್ಪರವರು ಸರ್ವೆ ನಂ.188 ಕ್ಕೆ ಸಂಬಂಧಪಟ್ಟಂತೆ ಪಾಲು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದು ಮಾಹಿತಿ ನೀಡಿರುತ್ತೇನೆ. ಈ ಕುರಿತಂತೆ ಮಾಹಿತಿ ನೀಡಬೇಕಾದರೆ ಎಲ್ಲಾ ದಾಖಲೆಗಳನ್ನು ನೋಡಿ ಮಾಹಿತಿ ನೀಡಿರುತ್ತೇನೆ. ಪಾಲು ವಾಟ್ನಿಯಾಗುವಾಗ ಯಾರು ಯಾರು ಸೇರಿದ್ದರು ಎಂದರೆ ಸಾಕ್ಷಿದಾರರು ನನ್ನ ತಂದೆ, ನನ್ನ ದೊಡ್ಡಪ್ಪ ಬೈಲಪ್ಪ ಮತ್ತು ಹಿರಿಯರು ಕೂಡಿರಬಹುದು ಎಂದು ಹೇಳುತ್ತಾರೆ. ಅವರು ಚೆನ್ನಪ್ಪ ರವರ ಮನೆಯಲ್ಲಿ ಕೂಡಿದ್ದರು. ಪಾಲು ವಾಟ್ನಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಬಾಂಡ್ ಮೇಲೆ ಬರೆದಿದ್ದಾರೋ ಅಥವಾ ಹಾಳೆ ಮೇಲೆ ಬರೆದಿದ್ದಾರೋ ಎಂದು ನನಗೆ ಗೊತ್ತಿರುವುದಿಲ್ಲ. ವಾಟ್ನಿ ಪತ್ರಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಪಾಲುವಾಟ್ನಿ ಪತ್ರವು ನೋಂದಣಿಯಾಗಿರಬೇಕು. ಅದು 1981 ರಲ್ಲಿ ನೊಂದಣಿಯಾಗಿರಬೇಕು. ಪಾಲು ವಾಟ್ನಿ ಪತ್ರಕ್ಕೆ ಸಂಬಂಧಪಟ್ಟಂತೆ "ಡ" ಉತಾರೆಯನ್ನು ಬಿಟ್ಟು ಬೇರೆ ದಾಖಲೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ರೀತಿ "ಡ" ಆಗಬೇಕಾದರೆ ವರದಿ ನೀಡಬೇಕಾಗುತ್ತದೆ ಎಂದರೆ ಸಾಕ್ಷಿದಾರರು ನನಗೆ ಅಷ್ಟೊಂದು ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. "ಡ" ಉತಾರೆಯಲ್ಲಿ ಏನು ಬರೆದಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ಭೂ-ನ್ಯಾಯಮಂಡಳಿಯವರು ನನ್ನ ತಂದೆಯ ತಂದೆಯಾದ ಬೈಲಪ್ಪ ರವರಿಗೆ 3414 ರೂಪಾಯಿಗಳನ್ನು ಕಟ್ಟಬೇಕೆಂದು ನೋಟಿಸ್ ನೀಡಿದ್ದರ ಬಗ್ಗೆ ಗೊತ್ತಿರುವುದಿಲ್ಲ. ಬೈಲಪ್ಪರವರು 3414 ರೂಪಾಯಿಗಳನ್ನು ಕಟ್ಟಿರುವ ಬಗ್ಗೆ ರಸೀದಿಯನ್ನು ಹಾಜರುಪಡಿಸಿರುವುದಿಲ್ಲ. ಸದರಿ "ಡ" ರಚನೆಯಾಗುವಾಗ ಚೆನ್ನಪ್ಪ ಮತ್ತು ಅವರ ಮಕ್ಕಳಿಗೆ ನೋಟಿಸ್ ನೀಡಿರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಚೆನ್ನಪ್ಪ ರವರು ಜೀವಂತವಿದ್ದಾಗ ಸರ್ವೆ ನಂ.188 ರಲ್ಲಿ 8 ಎಕರೆ ಬೈಲಪ್ಪ ರವರಿಗೆ ಕೊಟ್ಟಿರುವ ಬಗ್ಗೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಖೊಟ್ಟಿ "ಡ" ಸೃಷ್ಟಿ ಮಾಡಿರುತ್ತೇವೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಚೆನ್ನಪ್ಪ ರವರಿಗೆ ಗೊತ್ತಿರದ ಹಾಗೆ ಬೈಲಪ್ಪ ರವರು ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಶಾಮೀಲಾಗಿ ಖೊಟ್ಟಿ "ಡ" ವನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1981 ರಿಂದ 2019 ರವರೆಗೆ ನಾವೇ ಸಾಗುವಳಿ ಮಾಡುತ್ತಿದ್ದೇವೆ ಎಂದು ತೋರಿಸಲು "ಡ" ಉತಾರೆಯನ್ನು ಬಿಟ್ಟು ಯಾವುದೇ ದಾಖಲೆಗಳು ಇರುವುದಿಲ್ಲ. 1981 ರಿಂದ 2019 ರವರೆಗೆ ನಾನು ಸಾಗುವಳಿ ಮಾಡಿ ಅದರ ಬೆಳೆಗಳನ್ನು ತೆಗೆದುಕೊಂಡು ಮಾರಾಟ ಮಾಡಿದ್ದರ ಬಗ್ಗೆ ಮಾನ್ಯ

ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಮತ್ತು ಅಮರೇಶ ರವರು 1989 ರಲ್ಲಿ ಪಾಲು ವಾಟ್ನಿ ಮಾಡಿಕೊಂಡಿರುತ್ತೇವೆ. ಈ ರೀತಿ ಪಾಲುವಾಟ್ನಿ ಮಾಡಿಕೊಂಡಿರುವ ಬಗ್ಗೆ ದಾಖಲೆಗಳಿದ್ದು, ಅವುಗಳನ್ನು ಹಾಜರುಪಡಿಸುತ್ತೇನೆ. 1989 ರಲ್ಲಿ ನಾನು ಮತ್ತು ಅಮರೇಶ ಪಾಲುವಾಟ್ನಿ ಮಾಡಿಕೊಳ್ಳುವಾಗ ಚೆನ್ನಪ್ಪ ಮತ್ತು ಅವರ ಮಕ್ಕಳಿಗೆ ವಿಷಯ ತಿಳಿಸಿರುವುದಿಲ್ಲ. ಸದರಿ ಜಮೀನನ್ನು ಅಭಿವೃದ್ಧಿಪಡಿಸಿರುತ್ತೇನೆ ಎಂದು ಮಾಹಿತಿಯನ್ನು ನಮ್ಮ ವಕೀಲರಿಗೆ ನೀಡಿದ್ದೇನೆ. ಸದರಿ ಜಮೀನನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸುತ್ತೇನೆ. 8 ಎಕರೆ ಕ್ಷೇತ್ರವನ್ನು ನಮಗೆ ಬಿಟ್ಟುಕೊಟ್ಟಿರುತ್ತಾರೆ ಮತ್ತು ನಾವು ಅದರ ಕಬ್ಜಾದಲ್ಲಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯನ್ನು ಎತ್ತಿ ಹಾಕಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.188 ರಲ್ಲಿ 188/1 ಮತ್ತು 188/2 ಎಂದು ಎರಡು ಪಟ್ಟಿಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿದಾರರಿಗೆ ಸದರಿ ಎರಡು ಸರ್ವೆ ನಂಬರಗಳ ಉತಾರೆಗಳನ್ನು ತೋರಿಸಿದ್ದು, ಸಾಕ್ಷಿದಾರರು ಅವುಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ಕ್ರಮವಾಗಿ ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. 8 ಎಕರೆ ಸಂಬಂಧಪಟ್ಟಂತೆ ಆಸ್ತಿಯು ಬಸನಗೌಡ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಈ ಕುರಿತು ವಾದಿ ಪರ ವಕೀಲರು ಸರ್ವೆ ನಂ.188/3 ರ ಉತಾರೆಯನ್ನು ಹಾಜರಪಡಿಸಿ ಕೇಳಿದಾಗ ಸಾಕ್ಷಿದಾರರು ಅದನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಸರ್ವೆ ನಂ.188/1 ಮತ್ತು 188/2 ಇವುಗಳು ಮೂಲತಃ ಸರ್ವೆ ನಂ.188 ರ ಭಾಗ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ